# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 860
ಮಾನ್ಯ ಸದಸ್ಯರ ಹೆಸರು : ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 11-03-2026
ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ (KSHIP) 2024 ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ರಸ್ತೆಯ (Connecting roads) ಯಾವ ಯಾವ ರಸ್ತೆ ಕಾಮಗಾರಿಗಳ ಯೋಜನೆಯನ್ನು ರೂಪಿಸಲಾಗಿದೆ; ಪ್ರತಿ ಕಾಮಗಾರಿಯ ವೆಚ್ಚವೆಷ್ಟು; ಕಾಮಗಾರಿಗಳು ಯಾವ ಹಂತದಲ್ಲಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ (KSHIP) ಮೂಲತ: ಬಾಹ್ಯ ಹಣಕಾಸಿನ ನೆರವಿನೊಂದಿಗೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು. ಸದರಿ ಯೋಜನೆಯಡಿಯಲ್ಲಿ 2024 ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ರಸ್ತೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಯನ್ನು ರೂಪಿಸಲಾಗಿರುವುದಿಲ್ಲ.<br><br>ಆದರೆ, ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ಈ ಕೆಳಕಂಡ ಮೂರು ರಸ್ತೆಗಳನ್ನು ಹೈಬ್ರಿಡ್ ವರ್ಷಾಸನ ಮಾದರಿಯಲ್ಲಿ (HAM) ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ವಹಿಸಲಾಗಿದ್ದು, ಅವುಗಳಲ್ಲಿ 2 ಕಾಮಗಾರಿಗಳನ್ನು ಶೀಘ್ರ ಅನುಷ್ಠಾನಗೊಳಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (KSHIP) ಗೆ ನೀಡಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ. |

| ಕ್ರ ಸಂ. | ಕಾಮಗಾರಿ ವಿವರ | ಯೋಜನಾ ಮೊತ್ತ (ರೂ. ಕೋಟಿ ಗಳಲ್ಲಿ) (ಜಿ.ಎಸ್.ಟಿ ಒಳಗೊಂಡ ಂತೆ) | ಟೆಂಡರ್‌ಗಿಟ್ಟ ಮೊತ್ತ (ರೂ. ಕೋಟಿ ಗಳಲ್ಲಿ) (ಜಿ.ಎಸ್.ಟಿ ಒಳಗೊಂಡ ಂತೆ) | ಅಂದಾಜಿಸಿರುವ ಅರ್ಧವಾರ್ಷಿಕ ವರ್ಷಾಸನ ಮೊತ್ತ (ರೂ. ಕೋಟಿಗಳಲ್ಲಿ) (ಜಿ.ಎಸ್.ಟಿ ಹೊರತುಪಡಿಸಿ) | ಅನುಮೋದಿತ ಅರ್ಧವಾರ್ಷಿಕ ವರ್ಷಾಸನ ಮೊತ್ತ (ರೂ. ಕೋಟಿಗಳಲ್ಲಿ) ಜಿ.ಎಸ್.ಟಿ ಹೊರತುಪಡಿಸಿ) | ಪ್ರಸ್ತುತ ಹಂತ | ಅನುಷ್ಠಾನ ಘಟಕ |
|---|---|---|---|---|---|---|---|
| 1 | ವೇಮಗಲ್–ಮಾಲೂರು ಮತ್ತು ಮಾಲೂರು ಕೈಗಾರಿಕಾ ಪ್ರದೇಶ–ತಮಿಳುನಾಡು ಗಡಿಯವರೆಗೆ. | 958.00 | 571.23 | 42.75 | – | ಟೆಂಡರ್ ಆರ್ಥಿಕ ಬಿಡ್ ಪರಿಶೀಲನೆಯಲ್ಲಿರುತ್ತದೆ. | ಕೆಶಿಪ್ |
| 2 | ಹೊಸಕೋಟೆ–ಮಾಲೂರು, ಮಾಲೂರಿನಲ್ಲಿ Elevated Corridor ಸೇರಿ ಮಾಲೂರು ಕೈಗಾರಿಕಾ ಪ್ರದೇಶ ಒಳಗೊಂಡಂತೆ. | 1054.00 | 828.46 | 68.00 | 69.00 (ಶೇ.1.47 ಅಧಿಕ) | ದಿನಾಂಕ: 06–01–2026 ರಂದು ನೇಮಕಾತಿ ದಿನಾಂಕ ಘೋಷಿಸಿ, ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ. | ಕೆಶಿಪ್ |
| | ದೇವನಹಳ್ಳಿ–ವಿಜಯಪುರ–ವೇಮಗಲ್–ಕೋಲಾರ. | 1178.00 | 762.86 | 56.65 | 50.50 (ಶೇ.10.85 ಕಡಿಮೆ) | ದಿನಾಂಕ: 03–03–2026 ರಂದು ಗುತ್ತಿಗೆ ಕರಾರು ನಿರ್ವಹಿಸಲಾಗಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ. | ಕೆಆರ್‌ಡಿಸಿಎಲ್ |

| | | |
|---|---|---|
| ಆ) | ವೇಮಗಲ್‌ನಿಂದ ತಮಿಳುನಾಡು ಗಡಿಯ ಕಿ.ಮೀ.36.586 ವರೆಗಿನ ಉದ್ದಕ್ಕೆ ಪಿಪಿಪಿ-ಡಿಬಿಎಫ್‌ಒಎಂಟಿ-ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು) | ಸದರಿ ಕಾಮಗಾರಿಯಡಿಯಲ್ಲಿ 36.586 ಕಿ.ಮೀ ಉದ್ದದ ರಸ್ತೆಯನ್ನು ಪಿಪಿಪಿ-ಡಿಬಿಎಫ್‌ಒಎಂಟಿ-ಹೈಬ್ರಿಡ್ ಆನ್ಯೂಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದು, ಕಾಮಗಾರಿಯನ್ನು ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (KSHIP) ವತಿಯಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಮೌಲ್ಯಮಾಪನ ಹಂತದಲ್ಲಿರುತ್ತದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಿ ಕನಿಷ್ಠತಮ ಬಿಡ್‌ದಾರರಾಗಿದ್ದ M/s Ramalingam Construction Company Pvt. Ltd. ರವರು ಕೆ.ಆರ್.ಡಿ.ಸಿ.ಎಲ್ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಮತ್ತೊಂದು ಕಾಮಗಾರಿಗೆ ಸಂಬಂಧಪಟ್ಟಂತೆ ಡಿಬಾರ್ ಆಗಿದ್ದು, ಈ ಸಂಬಂಧ ಸದರಿಯವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ದಿನಾಂಕ:09-12-2025 ರಂದು ಸದರಿ ಪ್ರಕರಣವನ್ನು ವಜಾಗೊಳಿಸಿ ಅಂತಿಮ ಆದೇಶ ನೀಡಿರುತ್ತದೆ. ಈ ಸಂಬಂಧ ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮವಹಿಸಬೇಕಾಗಿರುತ್ತದೆ. ಈ ಕುರಿತು ನಿಯಮಾನುಸಾರ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು. |
| ಇ) | ಕರ್ನಾಟಕ ರಾಜ್ಯದಲ್ಲಿ ಹೊಸಕೋಟೆಯಿಂದ ಮಾಲೂರುವರೆಗೆ ಹಾಗೂ ಮಾಲೂರು ಎಲಿವೇಟೆಡ್ ಕಾರಿಡಾರ್‌ನ ಮಾಲೂರು ಕೈಗಾರಿಕಾ ಪ್ರದೇಶದ ಕಿ.ಮೀ 25.615 ವರೆಗಿನ ಉದ್ದಕ್ಕೆ ಪಿಪಿಪಿ-ಡಿಬಿಎಫ್‌ಒಎಂಟಿ-ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು) | ಸದರಿ ಕಾಮಗಾರಿಯಡಿಯಲ್ಲಿ 25.615 ಕಿ.ಮೀ ಉದ್ದದ ರಸ್ತೆಯನ್ನು ಪಿಪಿಪಿ-ಡಿಬಿಎಫ್‌ಒಎಂಟಿ-ಹೈಬ್ರಿಡ್ ಆನ್ಯೂಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದು, ಕಾಮಗಾರಿಯನ್ನು ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (KSHIP) ವತಿಯಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ದಿನಾಂಕ:17-10-2025 ರಂದು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಅದರಂತೆ, ದಿನಾಂಕ:06-01-2026 ರಂದು ನೇಮಕಾತಿ ದಿನಾಂಕವನ್ನು (Appointed date) ಘೋಷಿಸಲಾಗಿದ್ದು, ಪ್ರಸ್ತುತ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ. |
| ಈ) | ದೇವನಹಳ್ಳಿ-ವೇಮಗಲ್-ಕೋಲಾರ ಕಿ.ಮೀ 49.284 ವರೆಗೆ ಉದ್ದಕ್ಕೆ ಪಿಪಿಪಿ-ಡಿಬಿಎಫ್‌ಒಎಂಟಿ-ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆಯ ಕಾಮಗಾರಿಯು ಯಾವ ಹಂತದಲ್ಲಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ಸದರಿ ಕಾಮಗಾರಿಯಡಿಯಲ್ಲಿ 48.20 ಕಿ.ಮೀ ಉದ್ದದ ರಸ್ತೆಯನ್ನು ಪಿಪಿಪಿ-ಡಿಬಿಎಫ್‌ಒಎಂಟಿ-ಹೈಬ್ರಿಡ್ ಆನ್ಯೂಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದು, ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿದ್ದ ಬಿಡ್‌ದಾರರಾದ M/s MP-24 and M/s Ramalingam Construction Company Pvt. Ltd. (Consortium) ಒಕ್ಕೂಟವು ನಕಲಿ ದಾಖಲಾತಿ ಸಲ್ಲಿಸಿದ್ದ ಕಾರಣ ಅವರನ್ನು ಡಿಬಾರ್ ಮಾಡಿ, ಟೆಂಡರ್‌ನಲ್ಲಿ ಅನರ್ಹಗೊಳಿಸಿ ಅವರುಗಳ ವಿರುದ್ಧ FIR No.0106, ದಿನಾಂಕ:14-08-2025 ರಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿರುತ್ತದೆ. ಡಿಬಾರ್ ಆದೇಶದ ವಿರುದ್ಧ ಸದರಿ ಒಕ್ಕೂಟದ |

| | | |
|---|---|---|
| | | ಇಬ್ಬರು ಸದಸ್ಯರಾದ M/s MP-24 and M/s Ramalingam Construction Company Pvt. Ltd. ರವರುಗಳು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದ W.P No.24912/2025, W.P No.25668/2025, W.P No. 22904/2025 ಮತ್ತು W.P No.31906/2025 ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಡಿಬಾರ್ ಮಾಡಿರುವುದನ್ನು ಹಾಗೂ ಟೆಂಡರ್‌ನಲ್ಲಿ ಅನರ್ಹಗೊಳಿಸಿರುವುದನ್ನು ಎತ್ತಿಹಿಡಿದಿರುತ್ತದೆ. ಈ ಸಂಬಂಧ ಸದರಿಯವರುಗಳು ದಾಖಲಿಸಿದ್ದ W.A No.2026/2025, W.A No.2028/2025, W.A No.2140/2025 ಪ್ರಕರಣಗಳಲ್ಲಿ, ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ಟೆಂಡರ್ ಪ್ರಕ್ರಿಯೆಯನ್ನು ಮುಂದುವರೆಸಲು ಅಥವಾ ಅಗತ್ಯ ಸೂಕ್ತ ಕ್ರಮವಹಿಸಲು ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಿರುತ್ತದೆ. ಅದರಂತೆ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ದಿನಾಂಕ:03-03-2026 ರಂದು ಯಶಸ್ವಿ ಬಿಡ್‌ದಾರರೊಂದಿಗೆ ಕೆಆರ್‌ಡಿಸಿಎಲ್ ವತಿಯಿಂದ ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿದ್ದು, ನೇಮಕಾತಿ ದಿನಾಂಕವನ್ನು (Appointed date) ಘೋಷಿಸಿ, ಶೀಘ್ರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. |

ಸಂಖ್ಯೆ. ಲೋಇ 54 ಇಎಪಿ 2026

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು